# ಆಹಾ ಸುದ್ದಿ!

★ ಸಸಿತೋಟ



ಚೀನಾದ ಚೆಂಗಡುವಿನ ಯೋಂಗ್‌ಬಿಂಗ್ ಮೂಗಿನಿಂದಲೇ ವಾಹನದ ಟೈರ್‌ಗಳಿಗೆ ಗಾಳಿ ಹಾಕಿ ದಾಖಲೆ ಸ್ಥಾಪಿಸಿದ್ದಾನೆ. ಅದೂ ಒಟ್ಟಿಗೇ ಮೂರು ಟೈರ್‌ಗಳು, ಟೈರ್ ಮೇಲೆ ತಲಾ ಇಬ್ಬರು ವ್ಯಕ್ತಿಗಳು ನಿಂತಂತೆಯೇ ಈ ಉಸಿರಾಟ ಕಮ್ ಗಾಳಿ ಹಾಕುವುದನ್ನು ನಡೆಸುತ್ತಾನಂತೆ. ವಿಚಿತ್ರಗಳ ಪಟ್ಟಿಗೆ ಸೇರಬೇಕೆಂದೇ ಅಭ್ಯಾಸ ಮಾಡಿದ್ದಲ್ಲವಂತೆ. ಮೂಗಿನ ತೊಂದರೆ ನಿವಾರಿಸಿಕೊಳ್ಳಲು ನಾಟಿ ವೈದ್ಯನ ಸಲಹೆಯಂತೆ ಮೂಗಿನಿಂದ ಟೈರ್‌ಗೆ ಗಾಳಿ ಹಾಕಲು ಶುರು ಮಾಡಿದನಂತೆ. ಮೂಗು ಸರಿ ಹೋದ ಮೇಲೆ ದಾಖಲೆಯ ಹುಚ್ಚು ತಲೆಗೆ ಹತ್ತಿತು.

ಟೊರೋಂಟೋದಲ್ಲಿ ಟ್ಯಾಕ್ಸಿ ಪಯಣ ಮಾಡುವಾಗ ಹುಷಾರಾಗಿರಿ. ಪ್ರಯಾಣ ಮಾಡುವಾಗ ವಾಂತಿ ಮಾಡುವ ಹವ್ಯಾಸವಿದ್ದರೆ 25 ಡಾಲರ್ ಹೆಚ್ಚುವರಿಯಾಗಿ ಇಟ್ಟುಕೊಳ್ಳಿ. ಅಲ್ಲಿ 'ವಾಂತಿ ಶುಲ್ಕ' ಎಂದು 25 ಡಾಲರ್ ಕೊಡಬೇಕಂತೆ. ದುಡ್ಡು ಕಡಿಮೆ ಬಿದ್ದರೆ ಪ್ಲಾಸ್ಟಿಕ್ ಕವರ್ ಜೊತೆಗಿಟ್ಟುಕೊಂಡು ಹೋಗಿ.

ಜಪಾನ್ ಪ್ರಧಾನಿ ಶಿಂಜೊ ಅಬೆಯ 3ಡಿ ಚಿತ್ರವಿದು. ಚೀನಾದಲ್ಲಿ ನಿರ್ಮಾಣ ಹಂತದ ಕಟ್ಟಡದ ಗೋಡೆಯ ಮೇಲೆ ಚಿತ್ರಿಸಲಾಗಿದೆ. ದೃಷ್ಟಿ ತಾಕಬಾರದು ಎಂಬ ಉದ್ದೇಶ ಚೀನಾದ್ದಾದರೆ, ಜಪಾನಿನ ದೃಷ್ಟಿ ಇದರ ಮೇಲೆ ಬಿದ್ದು ರಾಜತಾಂತ್ರಿಕ ಕ್ರಮ ಕೈಗೊಳ್ಳಲು ಮುಂದಾಗಿದೆಯಂತೆ.





ಬ್ರೆಜಿಲ್‌ನ ಬೀಚ್‌ನಲ್ಲಿ ಪ್ಯಾಡಲ್ ಬೋರ್ಡ್ ಮೇಲೇ ಯೋಗಾಸನ ಮಾಡುತ್ತಿರುವ ಈ ಬಾಲೆ ಕ್ಯಾನೆಟ್ಟಿ. ಸಾಕುನಾಯಿಯೇ ಪ್ರೇಕ್ಷಕ ಎಂದುಕೊಂಡಿರಾ? ಇಲ್ಲ, ಮುಂದೆ ನಡೆಯಲಿರುವ ಪ್ಯಾಡಲ್ ಸರ್ಫರ್ ಸ್ಪರ್ಧೆಗೆ ತರಬೇತಿ ನೀಡುವ ಪರಿಯಿದು. ನಾಯಿಯ ಜೊತೆ ಬಂದರೆ ಮಾತ್ರ ಸ್ಪರ್ಧೆಗೆ ಅವಕಾಶ ಎಂದಿದ್ದಾರಂತೆ ಆಯೋಜಕರು. ಸದ್ಯ, ನಾಯಿ ಎಂತಹ ಯೋಗಾಸನಕ್ಕೂ ಬೆದರದೆ ಜೊತೆಕೊಟ್ಟರೆ ಸಾಕಂತೆ. ಮುಂದೊಂದು ದಿನ ಅದೂ ಯೋಗಾಸನ ಹಾಕಬೇಕಾಗುತ್ತದೆ ಎಂಬ ಷರತ್ತು ವಿಧಿಸಬಹುದು.

'ನೋ ಪ್ಯಾಂಟ್ ಸಬ್‌ವೇ ರೈಡ್' ದಿನಾಚರಣೆ ಪ್ರಪಂಚದ ವಿವಿಧೆಡೆ ಇತ್ತೀಚೆಗೆ ನಡೆಯಿತು. ರೈಲು ನಿಲ್ದಾಣದಲ್ಲಿ ಪ್ರಯಾಣಿಕರು ಪ್ಯಾಂಟ್ ಕಳಚಿ ರೈಲನ್ನೇರಿದರು. ಆದರೆ ಬ್ರಸೆಲ್ಸ್‌ನಲ್ಲಿ ಕೆಲವರು ಪ್ಯಾಂಟ್ ಜೊತೆ ಪ್ಯಾಂಟಿಯನ್ನೂ ಕಳಚಿ ಪಯಣ ಮಾಡಿದ್ದು, ಪೊಲೀಸರು ನಂತರ ಎಚ್ಚೆತ್ತುಕೊಂಡು ಹುಡುಕಾಟ ಶುರು ಮಾಡಿದ್ದಾರಂತೆ.

ಆಸ್ಟ್ರೇಲಿಯಾದ ಪುಟ್ಟ ಪಟ್ಟಣ ಸೌತ್ ಜಾನ್‌ಸ್ಟೋನ್‌ನಲ್ಲಿ ಕ್ರಿಸ್ಮಸ್ ಸಂದರ್ಭದಲ್ಲಿ 30-40 ಸೌರದೀಪಗಳನ್ನು ಯಾರೋ ಕದ್ದುಕೊಂಡು ಹೋದರಂತೆ. ಅದನ್ನು ನೋಡಿದ ವ್ಯಕ್ತಿ ಪೊಲೀಸರಿಗೆ ವಿವರಿಸುವಾಗ ಕಳ್ಳರು ಬಿಕಿನಿ ಧರಿಸಿದ್ದರು ಎಂಬ ಹೇಳಿಕೆ ನೀಡಿದ್ದು ನಗೆಪಾಟಲಿಗೀಡಾಗಿದೆ. ಆತ ಬೇರೆ ಯಾವ ವಿವರವನ್ನೂ ನೀಡಲು ವಿಫಲನಾಗಿದ್ದು, ಬಿಕಿನಿ ಧರಿಸಿದವರನ್ನು ನೋಡಿ ಚಹರೆ ನೋಡಲು ಮರೆತುಬಿಟ್ಟ ಎಂದು ಪೊಲೀಸರೇ ಹೇಳಿದ್ದು, ಬಿಕಿನಿ ಬಿಟ್ಟು ಬೇರೆ ಗುರುತನ್ನು ನೋಡಿದವರಿಗಾಗಿ ಹುಡುಕಾಟ ನಡೆಸಿದ್ದಾರಂತೆ.

